ಶ್ರೀ ಧರ್ಮಸಿಂಗ್ :– ಮಾನ್ಯ ಸದಸ್ಯರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಸರ್ಕಾರ ಇದರ ಬಗ್ಗೆ ಗಮನ ಕೊಡುತ್ತದೆ.

ವಿಷಯ :– ಚಿಂತಾಮಣಿ ಸಮಗ್ರ ಬಾಲ ವಿಕಾಸ ಯೋಜನೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 274 (1259)

ಶ್ರೀ ಚೌಡಾರೆಡ್ಡಿ (ಚಿಂತಾಮಣಿ) :– ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಿಂತಾಮಣಿಯ ಬಾಲವಿಕಾಸ ಯೋಜನೆ ಎಂದಿನಿಂದ ಅಸ್ತಿತ್ವಕ್ಕೆ ಬಂದಿತು ಮತ್ತು ಎಷ್ಟು ವರ್ಷಗಳಿಂದ ಹಾಗೂ ಯಾವ ಏಜೆನ್ಸಿ ಮುಖಾಂತರ ಜಿಲ್ಲಾ ಮಟ್ಟದಲ್ಲಿ ಕೆಲಸ ನಿರ್ವಹಿಸುತ್ತಿದೆ ?

ಆ) ಸರ್ಕಾರಕ್ಕೆ ಈ ಕೆಳಗಿನ ಹುದ್ದೆಗಳು ಖಾಲಿ ಇರುವುದು ತಿಳಿದಿದೆಯೇ ?

ಮುಖ್ಯ ಸೇವಿಕಾ	—11
ಜವಾನ	— 3
ವಾಹನ ಚಾಲಕ	— 2
ಪ್ರ.ದ. ಸಹಾಯಕರು	— 2
ದ್ವಿ. ದ. ಸಹಾಯಕರು	— 1

ಬಾಲವಿಕಾಸ ಯೋಜನಾಧಿಕಾರಿಗಳು ಸೂಚಿಸಿದ್ದರು ಸಹ ಸದರಿ ಹುದ್ದೆಗಳನ್ನು ತುಂಬದಿರುವುದು ಸರ್ಕಾರಕ್ಕೆ ತಿಳಿದಿದೆಯೇ ?

ಇ) ಇದು ಮಿತವ್ಯಯ ಆದೇಶದ ಅಡಿ ಬಂದಿರುವುದಿಲ್ಲವೆಂಬುದು ಸರ್ಕಾರಕ್ಕೆ ತಿಳಿದಿದೆಯೇ ? ಹಾಗಿದ್ದಲ್ಲಿ ಕೆ. ಪಿ. ಎಸ್. ಸಿ. ಮತ್ತು ಜಿಲ್ಲಾ ಪರಿಷತ್‌ನವರು ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳದಿರುವ ಬಗ್ಗೆ ಕಾರಣವೇನು ?

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು) :–

ಅ) ಸದರಿ ಯೋಜನೆಗೆ ಒಂದು ವರ್ಷ 9 ತಿಂಗಳಾಗಿದೆ ಮತ್ತು ಈ ಯೋಜನೆಯು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪರಿಷತ್ತಿನ ಮೂಲಕ ಜಾರಿಗೊಳ್ಳುತ್ತಿದೆ.

ಆ) ಹೌದು. ಈ ಕೆಳಗಿನ ಹುದ್ದೆಗಳು ಬಾಲವಿಕಾಸ ಯೋಜನೆ, ಚಿಂತಾಮಣಿಯಲ್ಲಿ ಬಾಕಿ ಇರುತ್ತದೆ. ಮತ್ತು ಸದರಿ ಹುದ್ದೆಗಳನ್ನು ತುಂಬುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಮುಖ್ಯ ಸೇವಿಕಾ	— 8
ಜವಾನ	— 3
ವಾಹನ ಚಾಲಕ	— 2
ದ್ವಿ. ದ. ಸಹಾಯಕರು	— 1

ಇ) ಮಿತವ್ಯಯ ಆದೇಶದ ಅಡಿಯಲ್ಲಿ ಬರುತ್ತದೆ. ಮಿತವ್ಯಯ ಆದೇಶವನ್ನು ಸಡಲಿಸಿ ಈ ಹುದ್ದೆಗಳನ್ನು ತುಂಬಲು ಆದೇಶ ಹೊರಡಿಸಿದೆ.

ಶ್ರೀ ಚೌಡರೆಡ್ಡಿ :– ಮಾನ್ಯ ಅಧ್ಯಕ್ಷರೇ, ಸಮಗ್ರ ಬಾಲವಿಕಾಸ ಯೋಜನೆಗೆ ಹಣದ ಸಹಾಯವನ್ನು ಕೇಂದ್ರ ಸರ್ಕಾರ ಕೊಡುತ್ತದೋ ಅಥವಾ ರಾಜ್ಯ ಸರ್ಕಾರದ್ದೋ ?

ಶ್ರೀ ಬಿ. ಶಿವಣ್ಣ :– ಮಾನ್ಯ ಅಧ್ಯಕ್ಷರೇ, ಕೇಂದ್ರ ಸರ್ಕಾರವೂ ಕೊಡುತ್ತದೆ. ಮತ್ತು ನಾವೂ ಕೂಡಾ ಕೊಡುತ್ತೇವೆ.

ಶ್ರೀ ಚೌಡರೆಡ್ಡಿ :– ಮಾನ್ಯ ಅಧ್ಯಕ್ಷರೇ, ನಮ್ಮ ತಾಲ್ಲೂಕಿನಲ್ಲಿ 1 ವರ್ಷ 9 ತಿಂಗಳ ಹಿಂದೆ ಈ ಬಾಲ ವಿಕಾಸ ಯೋಜನೆ ಪ್ರಾರಂಭವಾಗಿದೆ. ಈ ಯೋಜನೆ ಅಡಿಯಲ್ಲಿ ಒಂದು ಜೀಪನ್ನು ಒದಗಿಸಿದ್ದು ಅದಕ್ಕೆ ಡ್ರೈವರ್ ಇಲ್ಲ. ಮತ್ತು ಬೇರೆ ಹುದ್ದೆಗಳು ಖಾಲಿ ಇವೆ. ಬಾಲ ವಿಕಾಸ ಯೋಜನೆ ಹಳ್ಳಿಗಳಲ್ಲಿ ನಡೆಯತಕ್ಕದ್ದು, ಎಲ್ಲ ಹಳ್ಳಿಗಳಿಗೂ ಸಾಮಗ್ರಿಗಳನ್ನು ಕಳುಹಿಸಿಕೊಡಬೇಕಾಗುತ್ತದೆ. ಈರೀತಿ ಹುದ್ದೆಗಳು ಖಾಲಿ ಇದ್ದು ಸಾಮಗ್ರಿಗಳು ಹಳ್ಳಿಗಳಿಗೆ ಮುಟ್ಟದೇ ಇರುವಾಗ ಬಾಲ ವಿಕಾಸ ಯೋಜನೆ ಸಾರ್ಥಕವಾಗುವುದಕ್ಕೆ ಸಾಧ್ಯವೇ ?

ಶ್ರೀ ಬಿ. ಶಿವಣ್ಣ :– ಈ ತೊಂದರೆ ಇದುವರೆವಿಗೂ ಇತ್ತು. ಇತ್ತೀಚೆಗೆ ಸರ್ಕಾರ ಎಕಾನಮಿ ಆರ್ಡರ್‌ನ್ನು ತೆಗೆದಿದ್ದು 12–12–90ರಲ್ಲಿ ಈ ಇಲಾಖೆಯಲ್ಲಿ 690 ಪುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಆಜ್ಞೆ ಹೊರಡಿಸ ಲಾಗಿದೆ. ಇದರ ಪ್ರಕಾರ ಚಿಂತಾಮಣಿಗೂ ಏನೇನು ಸೌಕರ್ಯ ಕೊಡಬೇಕೋ ಅದನ್ನು ಕೊಡುತ್ತೇವೆ.

ವಿಷಯ :– ಕೊಡಗು ಜಿಲ್ಲೆಯ ಉದ್ಯೋಗ ವಿನಿಮಯ ಕೇಂದ್ರದಲ್ಲಿರುವ ಅಭ್ಯರ್ಥಿಗಳ ಸಂಖ್ಯೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 275 (1234)

ಶ್ರೀಮತಿ ಸುಮಾ ವಸಂತ್ (ವಿರಾಜಪೇಟೆ) :– ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೆ ?

ಅ) ಕೊಡಗು ಜಿಲ್ಲೆಯಲ್ಲಿ ಉದ್ಯೋಗಾವಕಾಶಗಳ ಸಲುವಾಗಿ ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೋಂದಣಿ ಮಾಡಿಸಿರುವ ಅಭ್ಯರ್ಥಿಗಳ ಸಂಖ್ಯೆ ಎಷ್ಟು ? (ತಾಲ್ಲೂಕುವಾರು ವಿವರಗಳನ್ನು ನೀಡುವುದು).

ಆ) ಅವರ ಪೈಕಿ ಜನವರಿಯಿಂದ ಇಲ್ಲಿಯವರೆಗೆ ಎಷ್ಟು ಜನ ಅಭ್ಯರ್ಥಿಗಳಿಗೆ ಉದ್ಯೋಗಾವಕಾಶದ ಸಲುವಾಗಿ ಯಾವ ಯಾವ ಸಂಸ್ಥೆಗಳಿಗೆ (ಸರ್ಕಾರ ಮತ್ತು ಖಾಸಗಿ) ಸಂದರ್ಶನಗಳನ್ನು ಕಳುಹಿಸಲಾಗಿದೆ.

ಇ) ಅವರ ಪೈಕಿ, ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದವರ ಸಂಖ್ಯೆ ಎಷ್ಟು ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

(ಕಾರ್ಮಿಕ ಸಚಿವರ ಪರವಾಗಿ) :–

ಅ) 13,754 (ತಾಲ್ಲೂಕುವಾರು ವಿವರ ಲಭ್ಯವಿರುವುದಿಲ್ಲ)

ಆ) 706.

ಇ) ಪರಿಶಿಷ್ಟಜಾತಿ — 217 ಪರಿಶಿಷ್ಟ ಪಂಗಡ — 70.

ಶ್ರೀಮತಿ ಸುಮಾ ವಸಂತ್ :– ಮಾನ್ಯ ಅಧ್ಯಕ್ಷರೇ, ತಾಲ್ಲೂಕುವಾರು ಕೊಡಗು ಜಿಲ್ಲೆಯಲ್ಲಿ ಉದ್ಯೋಗಾವಕಾಶಗಳ ಸಲುವಾಗಿ ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೋಂದಣಿ ಮಾಡಿಸಿರುವ ಅಭ್ಯರ್ಥಿಗಳ ಲಭ್ಯವಿರುವುದಿಲ್ಲವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಅದನ್ನು ತರಿಸಿಕೊಡುತ್ತಾರೆಯೇ ? ನನ್ನ ಮೂರನೇ ಪ್ರಶ್ನೆಗೆ ಪರಿಶಿಷ್ಟ ಜಾತಿ 217 ಹಾಗೂ ಪರಿಶಿಷ್ಟ ಪಂಗಡದವರು 70 ಎಂದು ಉತ್ತರ ಕೊಟ್ಟಿದ್ದಾರೆ. ಇದು ಸರಿಯಲ್ಲವೆಂದು ನಾನು ಹೇಳುತ್ತೇನೆ. ಏಕೆಂದರೆ ಹಲವಾರು ವರ್ಷಗಳಿಂದ ಪರಿಶಿಷ್ಟಜಾತಿ ಹಾಗೂ ಪಂಗಡದವರು ಉದ್ಯೋಗ ವಿನಿಮಯ ಕೇಂದ್ರದಲ್ಲಿ ಹೆಸರು ನೋಂದಾಯಿಸಿದ್ದರೂ ಅವರಿಗೆ ಇಂಟರ್‌ವ್ಯೂ ಕಾರ್ಡ್ ಕಳುಹಿಸಿರುವುದಿಲ್ಲ. ಜೊತೆಗೆ ಏಜ್ ಬಾರ್ ಆಗಿ ಅವರಿಗೆ ಕೆಲಸ ಕೂಡಾ ಸಿಗುತ್ತಾ ಇಲ್ಲ. ಇದನ್ನು ಸರಿಪಡಿಸುತ್ತೀರಾ ?

ಶ್ರೀ ಟಿ. ಎನ್. ನರಸಿಂಹಮೂರ್ತಿ :– ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಏನು ತಾಲ್ಲೂಕುವಾರು ವಿವರಣೆ ಕೇಳಿದ್ದಾರೆ, ಅದನ್ನು ಕಳುಹಿಸಿಕೊಡುವುದಕ್ಕೆ ಸರ್ಕಾರ ಆಶ್ವಾಸನೆ ಕೊಡುತ್ತದೆ. ಮತ್ತು ಪರಿಶಿಷ್ಟಜಾತಿ ಹಾಗೂ ಪಂಗಡದವರಿಗೆ ಉದ್ಯೋಗದ ಭರವಸೆ ನಿರಾಶಾದಾಯಕವಾಗಿದೆ ಎಂದು ಹೇಳಿದ್ದಾರೆ. ಬಹುಶಃ ಉದ್ಯೋಗ ವಿನಿಮಯ ಕಛೇರಿಯಲ್ಲಿ ನೋಂದಾಯಿಸಿದವರೆಲ್ಲರಿಗೂ ಉದ್ಯೋಗವನ್ನು ಕೊಡುವಂಥ ಭರವಸೆ ಯನ್ನು ಕೊಡುವುದಕ್ಕಾಗುವುದಿಲ್ಲವೆನ್ನುವುದು ಮಂತ್ರಿ ಪದವಿಯಲ್ಲಿ ಇದ್ದ ಅವರಿಗೂ ಗೊತ್ತಿರುವ ವಿಷಯ. ಎಲ್ಲೆಲ್ಲಿ ಉದ್ಯೋಗಕ್ಕೆ ಬೇಡಿಕೆ ಬರುತ್ತದೋ ಅಂತಹ ಸಮಯದಲ್ಲಿ ಯಾವ ಯಾವ ವರ್ಗಕ್ಕೆ ಮೊಸಲು ಇರುತ್ತದೋ ಅಂತಹ ವರ್ಗದವರಿಗೆ ಇಂಟರ್‌ವ್ಯೂ ಕೊಡಲೇಬೇಕಾಗುತ್ತದೆ. ಈ ಬಗ್ಗೆ ಏನಾದರೂ ಔಚಿತ್ಯ ನಡೆದಿದ್ದರೆ ಅಂತಹ ನಿರ್ದಿಷ್ಟ ಪ್ರಕರಣಗಳು ಇದ್ದರೆ ಅದನ್ನು ಸರ್ಕಾರದ ಗಮನಕ್ಕೆ ತಂದರೆ ಅದನ್ನು ಖಂಡಿತ ವಾಗಿಯೂ ಸರಿಪಡಿಸಿ ಕೊಡುತ್ತೇನೆಂದು ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ಭರವಸೆ ಕೊಡುತ್ತೇನೆ.

ಶ್ರೀಮತಿ ಸುಮಾ ವಸಂತ್ :– ಉದ್ಯೋಗ ವಿನಿಮಯ ಕಛೇರಿಗಳಲ್ಲಿ ಪರಿಶಿಷ್ಟ ಜಾತಿ ಹಾಗೂ ಪಂಗಡ ದವರಿಗೆ ಕಡಿಮೆ ದರ್ಜೆಯ ಕೆಲಸಗಳಿಗೆ ಇಂಟರ್‌ವ್ಯೂ ಕಳಿಸುತ್ತಾರೆ. ಯಾರು ಇನ್‌ಫ್ಲೂಯೆನ್ಸ್ ಮಾಡುತ್ತಾರೆ, ಹಣ ಕೊಡುತ್ತಾರೆ ಅಂತಹವರಿಗೆ ಒಳ್ಳೆಳ್ಳೆಯ ಕೆಲಸದ ಬಗ್ಗೆ ಗಮನಹರಿಸುತ್ತಾರೆ. ಅದನ್ನು ಕೂಡಲೇ ಸರಿಪಡಿಸಬೇಕೆಂದು ಹೇಳುತ್ತೇನೆ.